
# ಶ್ರೀಶಂಕರರನ್ನು ಕುರಿತ ನಾಟಕ : 'ಚರತಿ ಭುವನೇ...'

ಶ್ರೀ ರಂಗನಾಥ ಕಟ್ಟಾಯ ಅವರು ಶಂಕರಾಚಾರ್ಯರ ಜೀವನದ ಬಗ್ಗೆ ಬರೆದ ನಾಟಕ **'ಚರತಿ ಭುವನೇ'**. ಸನಾತನ ಧರ್ಮ ಕುಸಿಯುತ್ತ ಬೌದ್ಧ, ಜೈನ ಮೊದಲಾದ ಧರ್ಮಗಳು ಪ್ರಾಬಲ್ಯ ಸಾಧಿಸಿದ ಘಟ್ಟದಲ್ಲಿ, ಪುನಃ ಅದನ್ನು ಮೇಲೆತ್ತಿದವರು ಆಚಾರ್ಯ ಶಂಕರರು. ಬೌದ್ಧ ಧರ್ಮ ಭಾರತದಲ್ಲಿ ನಶಿಸಲು ಇವರು ಕಾರಣರು ಎಂಬುದು ಸರಿಯಲ್ಲ. ಕರ್ಮಠರಾದ ಮೀಮಾಂಸಕರು ಆ ಕೆಲಸವನ್ನು ಮಾಡಿದರು. ಬೌದ್ಧ ತರ್ಕವನ್ನು ವಾದದಲ್ಲಿ ಸಮರ್ಥವಾಗಿ ಎದುರಿಸಿದವರು ವೇದಾಂತಿಗಳು ಮಾತ್ರ. ನಾಟಕ ಈ ವಿಚಾರವನ್ನು ಸರಿಯಾಗಿ ಗುರುತಿಸಿದೆ.




ಪ್ರಸ್ಥಾನಗಳಿಗೆ ಭಾಷ್ಯಗಳನ್ನು ಬರೆದು, ಸನಾತನ ಧರ್ಮವು ಮೇಲ್ಮೈಯನ್ನು ಪಡೆಯುವಂತೆ ಮಾಡಿದ ಮಹಾನುಭಾವರು ಶಂಕರರು. ನಾಟಕದ ಮೊದಲ ದೃಶ್ಯದಲ್ಲಿ ಈ ಹಿನ್ನೆಲೆಯನ್ನು ತರಲಾಗಿದೆ. ಬೌದ್ಧ ಗುರು ಧರ್ಮಪಾಲರಿಂದ ಅವರ ತತ್ತ್ವಗಳು, ವಾದಕ್ರಮ, ಕೌಶಲ್ಯಗಳನ್ನು ಕಲಿತ ಕುಮಾರಿಲ ಭಟ್ಟನ ಗುಟ್ಟು ಹೊರಬಿದ್ದು, ಬೆಟ್ಟದ ಮೇಲಿನಿಂದ ನೂಕಿಸಿಕೊಂಡು, ವೇದಗಳು ಪ್ರಮಾಣವಾಗಿದ್ದರೆ ಏನೂ ಆಗದೇ ಇರಲಿ ಎಂದು ಹೇಳುವುದರ ಮೂಲಕ ಉಳಿದುಕೊಳ್ಳುವುದು ಮೂರನೆಯ ದೃಶ್ಯದಲ್ಲಿದೆ. ಶಂಕರರಿಂದ ಬ್ರಹ್ಮಸೂತ್ರ ಭಾಷ್ಯರಚನೆ, ಅವು ಸರಿಯಾಗಿದೆಯೆಂದು ಆಶ್ವಾಸನೆ, ಆಶೀರ್ವಾದಗಳನ್ನು ಸೂತ್ರಕಾರ ವ್ಯಾಸರೇ ಗುರು ಗೋವಿಂದ ಭಗವತ್ಪಾದರ ರೂಪದಲ್ಲಿ ಬಂದು ನೀಡುವುದು ನಾಲ್ಕನೆಯ ದೃಶ್ಯದ ವಸ್ತು. ಐದನೆಯ ದೃಶ್ಯದಲ್ಲಿ ಕಾಶಿಯಲ್ಲಿ ತಾವು 'ದೂರ ಸರಿ' ಎಂದು ತಿರಸ್ಕರಿಸಿದ ಚಾಂಡಾಲನು, 'ದೂರ ಸರಿಯಬೇಕಾದದ್ದು ನನ್ನ ದೇಹವೋ, ಆತ್ಮವೋ' ಎಂದಾಗ, ಮಾಯೆ ಕಳಚಿ, ಶಂಕರರು ಜ್ಞಾನಿಯಾದ ಅವನ ಕಾಲಿಗೆ ಎರಗುತ್ತಾರೆ.

**ಕೃತಿ: ಚರತಿ ಭುವನೇ**

**ಲೇಖಕರು : ರಂಗನಾಥ ಕಟ್ಟಾಯ**

**ಪ್ರಕಾಶನ : ಎಚ್.ಎಸ್.ಆರ್.ಎ. ಪಬ್ಲಿಕೇಷನ್ಸ್, ಬೆಂಗಳೂರು-೫೮**

**ಫೋ: 7892793054**

**ಪುಟ: 100**

**ಬೆಲೆ : 100**

ಕುಮಾರಿಲ ತನ್ನ ಬೌದ್ಧ ಗುರುವಿನ ಸಾವಿಗೆ ಕಾರಣನಾದ ಪಶ್ಚಾತ್ತಾಪಕ್ಕೆ ಒಳಗಾಗುವುದು ಏಳು, ಎಂಟನೆಯ ದೃಶ್ಯಗಳ ವಸ್ತು. ಶಂಕರರ ಕಾರ್ಯದ ಪ್ರಭಾವ ದೇಶದಾದ್ಯಂತ ಹಬ್ಬಿರುವುದನ್ನು ಈ ದೃಶ್ಯಗಳು ಚಿತ್ರಿಸಿವೆ. ಈ ಪ್ರಭಾವಳಿಯ ಹಿನ್ನೆಲೆಯಲ್ಲಿ ಶಂಕರರು ವ್ಯಾಕರಣ ಸೂತ್ರಗಳನ್ನು ಮನನ ಮಾಡುತ್ತಿದ್ದ ಸಾಮಾನ್ಯ ವೃದ್ಧ ಪಂಡಿತನ ಯೋಚನೆಯನ್ನೇ ಜೀವನದ ಅರ್ಥದ ಕಡೆ ಹೋಗುವಂತೆ ಮಾಡುವ ಒಂಬತ್ತನೆಯ ದೃಶ್ಯ ಅವರ ಜೀವ ಕಾರುಣ್ಯವನ್ನು ತೋರಿಸುತ್ತದೆ. ಹತ್ತನೆಯ ದೃಶ್ಯದಲ್ಲಿ ವಾದಿಗಳು ಬೆಳಕಿನ ಬಗ್ಗೆ ಮಾತನಾಡದೆ ಬರೀ ಅನ್ಯರ ಕೊಳಕಿನ ಬಗ್ಗೆಯೆ ಮಾತನಾಡುವವರಲ್ಲ ಎನ್ನುವ ಕುಮಾರಿಲ ಭಟ್ಟರು ತಾವು ಪ್ರಾಯಶ್ಚಿತ್ತದ ತುಷಾಗ್ನಿಯಲ್ಲಿ ಬೇಯುತ್ತಿದ್ದರೂ, ಶಂಕರರ ಗ್ರಂಥಗಳನ್ನು ಅವಲೋಕಿಸಿ, ಸಂತೋಷಿಸಿ, ತನ್ನ ಬದಲು ಶಿಷ್ಯ ಮಂಡನನ ಬಳಿ ವಾದಕ್ಕೆ ಹೋಗಿ ಎನ್ನುತ್ತಾರೆ. ಹನ್ನೊಂದು ಹನ್ನೆರಡನೆಯ ದೃಶ್ಯಗಳಲ್ಲಿ ಮಂಡನನ ಠೇಂಕಾರ, ಶಂಕರರ ಮುಂದೆ ಅವನು ಸೋಲುವುದು, ಇಬ್ಬರನ್ನೂ ಭಿಕ್ಷೆಗೆ ಕರೆದ ಮಂಡನನ ಪತ್ನಿ ಉಭಯ ಭಾರತಿ ತನ್ನ ಗಂಡನ ಸೋಲನ್ನು ಸೂಚಿಸಿ, ಸಂಪೂರ್ಣ ಗೆಲುವಿಗೆ ತನ್ನನ್ನೂ ಗೆಲ್ಲಬೇಕೆಂದು ಹೇಳಿ, ಕಾಮಕಲೆಗಳ ಬಗ್ಗೆ ಪ್ರಶ್ನಿಸುವುದು, ಶಂಕರರು ಒಂದು ತಿಂಗಳ ಕಾಲಾವಕಾಶ ಕೇಳುವುದು ಈ ಸನ್ನಿವೇಶಗಳಿವೆ. ೧೩, ೧೪ನೆಯ ದೃಶ್ಯಗಳಲ್ಲಿ ಶಂಕರರ ಪರಕಾಯ ಪ್ರವೇಶ, ಉಭಯಭಾರತಿಗೆ ಉತ್ತರ, ಶಿಷ್ಯನಾಗುವ ಮಂಡನನೊಡಗೂಡಿ ಪರ್ಯಟನೆ ಮುಂದುವರಿಸುವ ವಿಷಯಗಳಿವೆ. ದೃಶ್ಯ ೧೫ರಲ್ಲಿ ಶಂಕರರು ತಾಯಿಯ ಮರಣ ಕಾಲದಲ್ಲಿ ಉಪಸ್ಥಿತರಿದ್ದು, ತಾವು ನೀಡಿದ್ದ ವಚನವನ್ನು ಪಾಲಿಸುವುದು, ೧೬ರಲ್ಲಿ ಇತರ ಶಿಷ್ಯರಿಂದ ದಡ್ಡನೆಂಬ ಅವಗಣನೆಗೆ ಒಳಗಾಗುವ ಗಿರಿಯು ತೋಟಕ ವೃತ್ತದಲ್ಲಿ ಶಂಕರರನ್ನು ಸ್ತುತಿಸಿ ಅವರ ಕೃಪೆಯ ಶಕ್ತಿಯನ್ನು ತೋರುವುದು — ಈ ಸನ್ನಿವೇಶಗಳಿವೆ.

ಅಧ್ಯಾಯ ೧೭-೧೮ರಲ್ಲಿ ಶಂಕರರು ಶಾರದಾ ದೇವಾಲಯದ ಸರ್ವಜ್ಞಪೀಠವನ್ನು ಏರುವುದು, ನಾಲ್ಕು ಪೀಠಗಳನ್ನು ಸ್ಥಾಪಿಸಿ, ೩೨ನೆಯ ವಯಸ್ಸಿನಲ್ಲಿ ಹಿಮಾಲಯದಲ್ಲಿ ಮುಕ್ತರಾಗುವುದು ಈ ವಿಷಯಗಳಿವೆ. ನಾಟಕದಲ್ಲಿ ಶಂಕರರ 'ಆಚರಣೆಗಳ ಬಗ್ಗೆ ಜುಗುಪ್ಸೆ ಹೊಂದಿ, ಧರ್ಮವನ್ನು ಗುಡಿಸಿ ಎಸೆಯುವುದು ಮೂರ್ಖತನ' ಎಂಬ ಮಾತಿನಲ್ಲಿ ಈ ಕಾಲದಲ್ಲೂ ಪ್ರಸ್ತುತವಾದ ವಿಚಾರಗಳಿವೆ ಎಂಬುದು ಗಮನಾರ್ಹ.

ಶಂಕರರ ಜೀವನದ ಇತಿಹಾಸದ ಬಗ್ಗೆ ಅನೇಕ ಗ್ರಂಥಗಳು ಇವೆಯಾದರೂ, ನಿಖರವಾಗಿಲ್ಲ. ಪರಸ್ಪರ ಜಗಳವಾಡುತ್ತಿದ್ದ ಸೂರ್ಯ, ಗಣಪತಿ, ಅಂಬಿಕಾ, ಶಿವ, ವಿಷ್ಣು ಮತ್ತು ಸ್ಕಂದ ಆರಾಧಕರನ್ನು ಒಪ್ಪಿಸಿ, ಎಲ್ಲರೂ ತಮ್ಮ ದೇವರನ್ನು ಮುಖ್ಯವಾಗಿಟ್ಟು ಇತರ ಐದೂ ದೇವತೆಗಳ (ಪಂಚಾ ಯತನ) ಒಟ್ಟಿಗೆ ಆರಾಧಿಸಬೇಕು ಎಂದು ನಿಯಮಿಸಿ ಒಟ್ಟುಗೂಡಿಸಿದ್ದು, ಸಂನ್ಯಾಸಿ ಸಂಪ್ರದಾಯಗಳನ್ನೂ ಒಟ್ಟುಗೂಡಿಸಿ, ದಶನಾಮೀ ಸಂಪ್ರ ದಾಯವನ್ನು ಆಚರಣೆಗೆ ತಂದದ್ದು, ಶ್ರುತಿ-ಸ್ಮೃತಿ-ಪುರಾಣಗಳ ಸಮನ್ವಯ, ಪೂಜಾವಿಧಿಗಳು, ಹೋಮ-ಹವನಗಳು, ಸಂಸ್ಕಾರಗಳನ್ನು ಕ್ರಮ ಗೊಳಿಸಿ ಸ್ಮಾರ್ತ ಸಂಪ್ರದಾಯವನ್ನು ಜಾರಿಗೊಳಿಸಿದ್ದು ಮುಂತಾಗಿ ಸಮಾಜವನ್ನು ಒಗ್ಗೂಡಿಸುವ ಕಾರ್ಯವನ್ನು ಮಾಡಿದರು. ಪುಟ್ಟ ನಾಟಕ ದಲ್ಲಿ ಎಲ್ಲವನ್ನೂ ತರಲು ಅಸಾಧ್ಯವಾದರೂ, ಶಂಕರರ ವ್ಯಕ್ತಿತ್ವವನ್ನು ಕಳೆಗಟ್ಟಿಸುವಲ್ಲಿ ನಾಟಕಕಾರರು ಸಫಲರಾಗಿದ್ದಾರೆ. ಹಿನ್ನೆಲೆಯ ಮಾತುಗಳಲ್ಲಿ ಸಾಕಷ್ಟು ವಿಚಾರಗಳನ್ನು ತಂದಿದ್ದಾರೆ. ಓದಿದ ಮೇಲೆ, ಗಂಭೀರ ನಾಟಕವಾದ ಇದನ್ನು ರಂಗದ ಮೇಲೆ ನೋಡಲು ಕುತೂಹಲವೆನಿಸುತ್ತದೆ. ❖